ಇ) ಉದ್ಭವಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಫಾರೆಸ್ಟ್ ಪ್ಲಾಂಟೇಶನ್ ಮಾಡಲಾದ ವಿಸ್ತೀರ್ಣ

574 (809) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಎಕರೆ ಭೂಮಿಯಲ್ಲಿ ಫಾರೆಸ್ಟ್ ಪ್ಲಾಂಟೇಷನ್ ಮಾಡಲಾಗಿದೆ?

(ವಿಭಾಗವಾರು ಮಾಹಿತಿ ನೀಡುವುದು)

ಆ) ಇದಕ್ಕಾಗಿ ನೆಡ್ಡ ಮಾಡಲಾದ ಹಣವೆಷ್ಟು?

ಇ) ಇದರಲ್ಲಿ ಎಷ್ಟು ಯಶಸ್ವಿಯಾಗಿವೆ ಹಾಗೂ ಎಷ್ಟು ಬೆಳೆಯದೆ ನಿಷ್ಪ್ರಯೋಜಕವಾಗಿವೆ?

ಶ್ರೀ ಈ..ಪಿ. ಶಂಭುನಾಥ (ಅರಣ್ಯ ರಾಜ್ಯ ಸಚಿವರು):-

ಅ) 1988-89 ರಿಂದ 1990-91ರವರೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಮಾಡಿದ ಫಾರೆಸ್ಟ್ ಪ್ಲಾಂಟೇಷನ್‌ಗಳ ವಿಭಾಗವಾರು ಮಾಹಿತಿ ಕೆಳಕಂಡಂತಿದೆ.

ಹಳಿಯಾಳ	-	14788.20 ಎಕರೆ
ಯಲ್ಲಾಪುರ	-	12623.20 ಎಕರೆ
ಕಾರವಾರ	-	4915.00 ಎಕರೆ
ಹೊನ್ನಾವರ	-	7020.00 ಎಕರೆ
ಶಿರಸಿ	-	10510.00 ಎಕರೆ
ಕೆ.ಡಿ.ಸಿ-ಕುಮಟಾ	-	5494.00 ಎಕರೆ
ಡಿ.ಎಲ್.ಡಿ.ಬಿ-ಮುಂಡಗೋಡ್	-	3475.00 ಎಕರೆ
ಒಟ್ಟು		58826.00 ಎಕರೆ

ಆ) ಮೂರು ವರ್ಷಗಳ ಅವಧಿಯಲ್ಲಿ ಫಾರೆಸ್ಟ್ ಪ್ಲಾಂಟೇಷನಗಳಿಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಡಲಾದ ಖರ್ಚಿನ ವಿವರ ಕೆಳಗಿನಂತಿದೆ.

ವಿಭಾಗ		ರೂ. ಲಕ್ಷಗಳಲ್ಲಿ
ಹಳಿಯಾಳ	-	301.75
ಯಲ್ಲಾಪುರ	-	305.40
ಕಾರವಾರ	-	71.49
ಹೊನ್ನಾವರ	-	177.52
ಶಿರಸಿ	-	124.81
ಕೆ.ಡಿ.ಸಿ-ಕುಮಟಾ	-	129.56
ಡಿ.ಎಲ್.ಡಿ.ಬಿ-ಮುಂಡಗೋಡ್	-	66.98
ಒಟ್ಟು		1177.51

ಇ) ನೆಡಲು ತೋಡುಗಳು ಮುಚ್ಚಿಯಾದ ಹಾಗೂ ಸಸಿಯದೆ ನಿಷ್ಪ್ರಯೋಜಕವಾಗಿರುವ ವಿವರವು ಈ ಕೆಳಗಿನಂತಿದೆ.

1) ಇಲಾಖೆಯು ಪ್ರತಿವರ್ಷ ಬೆಳೆಸಲಾದ ನೆಡುತೋಪುಗಳು ಕೇವಲ 80-90 ರಷ್ಟು ಯಶಸ್ವಿಯಾಗಿದೆ.

2) ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮದವರು ಬೆಳೆಸಲಾದ ನೆಡುತೋಪುಗಳು ಶೇಕಡಾ 80-90 ರಷ್ಟು ಯಶಸ್ವಿಯಾಗಿದೆ.

3) ಒಣ ಭೂಮಿ ಅಭಿವೃದ್ಧಿ ಮಂಡಳಿಯವರು ಬೆಳೆಸಲಾದ ನೆಡು ತೋಪುಗಳು ಶೇಕಡ 70-85ರಷ್ಟು ಯಶಸ್ವಿಯಾಗಿವೆ.

ಅತಿಕ್ರಮಣ ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿಯ ಸಕ್ರಮ

575 (810) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 1978ರ ಮಾರ್ಚ್‌ಗಿಂತ ಮೊದಲು ಎಷ್ಟು ಜನರು ಕೃಷಿಗಾಗಿ ಅರಣ್ಯ ಭೂಮಿಯನ್ನು ಅತಿಕ್ರಮವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ?

ಆ) ಹಾಗಿದ್ದಲ್ಲಿ ಸರ್ಕಾರ 1978ರ ಮಾರ್ಚ್‌ಗಿಂತ ಮೊದಲು ಮಾಡಲಾದ ಅತಿಕ್ರಮಣ ಭೂಮಿಯನ್ನು ಸಕ್ರಮಗೊಳಿಸಿ ಅಗಿನಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಮಂಜೂರು ಮಾಡುವ ಬಗ್ಗೆ ಆದೇಶವನ್ನು ಹೊರಡಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ ಎಂದು ಈ ಆದೇಶವನ್ನು ಹೊರಡಿಸಲಾಯಿತು?

ಈ) ಈ ಸರ್ಕಾರಿ ಆದೇಶದ ಫಲಕಾರ ಇದುವರೆಗೂ ಜಿಲ್ಲೆಯಲ್ಲಿ ಎಷ್ಟು ರೈತರ ಅತಿಕ್ರಮಣ ಸಾಗುವಳಿ ಜಮೀನುಗಳನ್ನು ಸಕ್ರಮಗೊಳಿಸಲಾಗಿದೆ.

ಶ್ರೀ ಈ.ಟಿ. ಶಂಭುನಾಥ (ಅರಣ್ಯ ರಾಜ್ಯ ಸಚಿವರು):-

ಅ) 3634

ಆ) ದಿನಾಂಕ 27-4-78ಕ್ಕಿಂತ ಪೂರ್ವದ ಅರಣ್ಯ ಭೂಮಿ ಅತಿಕ್ರಮಣಗಳನ್ನು ಸಕ್ರಮ ಗೊಳಿಸಲು ಆದೇಶ ಹೊರಡಿಸಿರುವುದು ನಿಜ.

ಇ) ದಿನಾಂಕ 10-10-1991

ಈ) ಇದುವರೆಗೂ ಯಾವುದೇ ಅತಿಕ್ರಮಣಗಳನ್ನು ಸಕ್ರಮ ಗೊಳಿಸಿರುವುದಿಲ್ಲ. ಆದರೆ ಅತಿಕ್ರಮಣಗಳನ್ನು ಸಕ್ರಮ ಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೊರತೆ ಇರುವ ಅರಣ್ಯ ರಕ್ಷಕರ ಹುದ್ದೆಗಳನ್ನು ತುಂಬುವುದು

576 (811) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿರುವ ಅರಣ್ಯ ರಕ್ಷಕರ ಸಂಖ್ಯೆ ಎಷ್ಟು?

ಆ) ಮಂಜೂರು ಆಗಿರುವ ಅರಣ್ಯರಕ್ಷಕರ ಸಂಖ್ಯೆ ಎಷ್ಟು?

ಇ) ಇನ್ನು ಎಷ್ಟು ಅರಣ್ಯ ರಕ್ಷಕರ ಕೊರತೆ ಇದೆ?

ಈ) ಇದನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಈ. ಟಿ. ಶಂಭುನಾಥ (ಅರಣ್ಯ ರಾಜ್ಯ ಸಚಿವರು):-

ಅ) 4135 ಹುದ್ದೆಗಳು